ದಿನಾಂಕಃ 02.05.2019 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ನೀಡಲಾಯಿತು.
ಮುಂದುವರಿದ ಮುಖ್ಯ ವಿಚಾರಣೆ ಃ ವಿಶೇಷ ಅಭಿಯೋಜಕರಿಂದ ಃ

5) ಟ್ರ್ಯಾಪ್ ಮುಂದೂಡುವಿಕೆಯ ಬಗ್ಗೆ ಲೋಕಾಯುಕ್ತ ಕಛೇರಿಯಲ್ಲಿ ಒಂದು ಪಂಚನಾಮೆ ಮಾಡಿರುತ್ತಾರೆ. ಸದರಿ ಪಂಚನಾಮೆಗೆ ನಾನು, ಪಿರ್ಯಾದಿದಾರ ಮತ್ತು ಇತರರು ಸಹಿ ಮಾಡಿರುತ್ತೇವೆ. ನಾನು ಈಗ ಸದರಿ ಪಂಚನಾಮೆ ನೋಡುತ್ತಿದ್ದು, ಅದನ್ನು ನಿ.ಪಿ-2 ಅಂತ ಗುರುತಿಸಲಾಯಿತು. ಮತ್ತು ಅದರ ಮೇಲಿರುವ ನನ್ನ ಸಹಿಯನ್ನು ನಿ.ಪಿ-2(ಎ) ಅಂತ ಗುರುತಿಸಲಾಯಿತು. ಮತ್ತು ಲೋಕಾಯುಕ್ತ ಪೋಲೀಸರು ನನಗೆ ದಿ.03.03.2014 ರಂದು ಬೆಳಿಗ್ಗೆ 10.30 ಕ್ಕೆ ಬರಲು ಹೇಳಿದರು. ಆ ದಿವಸ ಪೋಲೀಸರು ಪುನಃ ಮರು ವಹಿಸುವಿಕೆ ಪಂಚನಾಮೆಯನ್ನು ಮಾಡಿರುತ್ತಾರೆ. ಅದಕ್ಕೆ ನಾನು ಮತ್ತು ಸಹ ಪಂಚ ಸಹಿ ಮಾಡಿದ್ದು, ಸದರಿ ಮರು ವಹಿಸುವಿಕೆ ಪಂಚನಾಮೆಯನ್ನು ನಿ.ಪಿ-3 ಅಂತಲೂ ಮತ್ತು ನನ್ನ ಸಹಿಯನ್ನು ನಿ.ಪಿ-3(ಎ) ಅಂತಲು ಗುರುತಿಸಲಾಯಿತು. ಮತ್ತು ಸದರಿ ಪಂಚನಾಮೆಗೆ ಪೋಲೀಸರು ಮತ್ತು ಪಿರ್ಯಾದಿದಾರ ಸಹಿ ಮಾಡಿರುತ್ತಾರೆ. ಮತ್ತೆ ನಾವು ಸಹ ಪಂಚ ಪಿರ್ಯಾದಿದಾರ , ಲೋಕಯುಕ್ತ ಇನ್ ಸ್ಪೆಕ್ಟರ್ ಮತ್ತು ಸಿಬ್ಬಂದಿ ಪೋಲೀಸ್ ವಾಹನದಲ್ಲಿ ಕುರುಬರ ಹಾಸ್ಟೆಲ್ ಬಳಿ ಹೋದೆವು. ನಂತರ ನಾನು ಮತ್ತು ಪಿರ್ಯಾದಿದಾರ ಸದರಿ ಕುರುಬರ ಹಾಸ್ಟೆಲ್ಲಿನ ಒಳಗೆ ಹೋಗಿರುತ್ತೇವೆ. ಅಲ್ಲಿ ಆರೋಪಿ ಹಾಸ್ಟೆಲ್ಲಿನಲ್ಲಿ ಇರಲಿಲ್ಲ. ಮತ್ತು ಕಛೇರಿಯವರು ಆರೋಪಿ ಕಛೇರಿಯ ಕೆಲಸದ ಮೇಲೆ ಬೆಂಗಳೂರಿಗೆ ಹೋಗಿದ್ದಾರೆ. ಮತ್ತು 05.03.2014 ರಂದು ವಾಪಸ್ ಬರುತ್ತಾರೆ ಅಂತ ಹೇಳಿದರು. ನಂತರ ನಾವು ಲೋಕಾಯುಕ್ತ ಕಛೇರಿಗೆ ಬಂದು ಅಲ್ಲಿ ಟ್ರ್ಯಾಪ್ ಮುಂದೂಡಿದ ಬಗ್ಗೆ ಪಂಚನಾಮೆ ಮಾಡಿದ್ದು, ಅದಕ್ಕೆ ನಾನು, ಸಹ ಪಂಚ , ಪಿರ್ಯಾದಿದಾರರು ಮತ್ತು ಲೋಕಾಯುಕ್ತ ಸಿಬ್ಬಂದಿಯವರು ಸಹಿ ಮಾಡಿರುತ್ತೇವೆ. ನಾನು ಈಗ ಸದರಿ ಪಂಚನಾಮೆ ನೋಡುತ್ತಿದ್ದು, ಅದನ್ನು ನಿ.ಪಿ-4 ಅಂತ ಗುರುತಿಸಲಾಯಿತು. ಮತ್ತು ನನ್ನ ಸಹಿಯನ್ನು ನಿ.ಪಿ-4(ಎ) ಅಂತ ಗುರುತಿಸಲಾಯಿತು. ಮತ್ತು ಲೋಕಾಯುಕ್ತ ಪೋಲೀಸರು ನನಗೆ ನಾವು ನಿಮಗೆ ಪೋನ್ ಮಾಡಿದಾಗ ಬನ್ನಿ ಅಂತ ಹೇಳಿದರು.

6) ದಿ.06.03.2014 ರಂದು ಲೋಕಾಯುಕ್ತ ಪೋಲೀಸರು ನನಗೆ ಪೋನ್ ಮಾಡಿ ಠಾಣೆಗೆ ಬರಲು ಹೇಳಿದರು ಆ ಪ್ರಕಾರ ನಾನು ಠಾಣೆಗೆ ಹೋದೆ. ಮತ್ತು ಸಹ ಪಂಚರು ಸಹ ನಮ್ಮ ಜೊತೆ ಬಂದಿದ್ದರು. ಮತ್ತು ಅಲ್ಲಿ ಪುನಃ

ಪೋಲೀಸರು ನಮ್ಮ ಸಮಕ್ಷಮ ಮರು ವಹಿಸುವಿಕೆ ಪಂಚನಾಮೆ ಮಾಡಿದ್ದು, ಅದನ್ನು ಈಗ ನಿ.ಪಿ-5 ಅಂತ ಮತ್ತು ಅದರ ಮೇಲಿರುವ ನನ್ನ ಸಹಿಯನ್ನು ನಿ.ಪಿ-5(ಎ) ಅಂತ ಗುರುತಿಸಲಾಯಿತು. ಸದರಿ ಪಂಚನಾಮೆಗೆ ಪಿರ್ಯಾದಿದಾರ, ಸಹ ಪಂಚ ಮತ್ತು ಪೋಲೀಸರು ಸಹಿ ಮಾಡಿದ್ದಾರೆ. ನಂತರ ಪೋಲೀಸರು ನನ್ನನ್ನು ಮತ್ತು ಪಿರ್ಯಾದಿದಾರರನ್ನು ಸದರಿ ಕುರುಬರ ಹಾಸ್ಟೆಲ್ಲಿಗೆ ಕಳುಹಿಸಿ ಆರೋಪಿ ಬಂದಿದ್ದಾರೋ ಇಲ್ಲವೋ ನೋಡಿ ಬನ್ನಿ ಅಂತ ಕುಳಹಿಸಿದರು. ಆ ಪ್ರಕಾರ ನಾವು ಕಛೇರಿಗೆ ಹೋಗಿ ನೋಡಲಾಗಿ ಇನ್ನೂ ಆರೋಪಿ ಬಂದಿದ್ದಲ್ಲ. ಮತ್ತು ಕಛೇರಿಯವರು ಸಾಯಂಕಾಲ 4 ಗಂಟೆಗೆ ಬರಬಹುದು ಅಂತ ಹೇಳಿದರು. ಪುನಃ ನಾವು ಲೋಕಾಯುಕ್ತ ಕಛೇರಿಗೆ ಬಂದೆವು ಮತ್ತು ಅಲ್ಲೇ ಇದ್ದೆವು. ನಂತರ ನಾನು ಮತ್ತು ಪಿರ್ಯಾದಿದಾರ ಮೋಟಾರ್ ಬೈಕಲ್ಲಿನಲ್ಲಿ ಹಾಸ್ಟೆಲ್ಲಿಗೆ ಹೋದೆವು. ಒಳಗೆ ಹೋದಾಗ ಹಾಸ್ಟೆಲ್ಲಿನಲ್ಲಿ ಬಹಳ ಜನರು ಇದ್ದರು, ಜನಸಂದಣಿ ಕಡಿಮೆಯಾಗಲೀ ಅಂತ ಅಲ್ಲೇ ಇದ್ದೆವು. ಜನಸಂದಣಿ ಕಡಿಮೆಯಾದ ಮೇಲೆ ಪಿರ್ಯಾದಿದಾರ ಆರೋಪಿಯನ್ನು ಭೇಟಿಯಾದರು. ಪಿರ್ಯಾದಿದಾರರು ಆರೋಪಿಗೆ ತಮ್ಮ ಕರೆಂಟ್ ಕೆಲಸ ಆಯಿತಾ ಅಂತ ಕೇಳಿದರು. ಅದಕ್ಕೆ ಆರೋಪಿ ಇನ್ನೂ ನಿಮ್ಮ ಚೆಕ್ ಬಂದಿಲ್ಲ ಅಂತ ಹೇಳಿದರು. ಮತ್ತು ಆರೋಪಿ ಪಿರ್ಯಾದಿದಾರರಿಗೆ ಲಂಚದ ಹಣ ತಂದಿದ್ದೀರಾ ಅಂತ ಕೈಸನ್ನೆ ಮಾಡಿದರು. ಮತ್ತು ಆರೋಪಿ ಪಿರ್ಯಾದಿದಾರರಿಗೆ ಲಂಚದ ಹಣವನ್ನು ಕವರಿನಲ್ಲಿ ಇಟ್ಟುಕೊಡಿ ಅಂತ ಹೇಳಿದರು. ಅದಕ್ಕೆ ಪಿರ್ಯಾದಿದಾರ ಲಂಚದ ಹಣವನ್ನು ಆರೋಪಿ ಕೊಟ್ಟ ಕವರಿನಲ್ಲಿ ಇಟ್ಟು ಕೊಟ್ಟಿರುತ್ತಾರೆ. ಮತ್ತು ಆರೋಪಿ ಲಂಚದ ಹಣದ ಕವರನ್ನು ಟೇಬಲ್ ಡ್ರಾದಲ್ಲಿ ಹಾಕಿರುತ್ತಾರೆ. ಮತ್ತು ಪಿರ್ಯಾದಿದಾರ ಹಾಸ್ಟೆಲ್ಲಿನಿಂದ ಹೊರಬಂದು ಕರ್ಚೀಫ್‌ನಿಂದ ನಮಗೆ ಸನ್ನೆ ಮಾಡಿದರು. ನಂತರ ಲೋಕಾಯುಕ್ತ ಪೋಲಿಸರು , ನಾನು ಮತ್ತು ಸಹಪಂಚ ಹಾಸ್ಟೆಲ್ಲಿನ ಒಳಗೆ ಹೋದೆವು. ಪೋಲೀಸರು ಆರೋಪಿಗೆ ವಿಚಾರಿಸಿದಾಗ ಆರೋಪಿ ಪೋಲೀಸರಿಗೆ ಬೇರೆ ಕವರ್ ಕೊಟ್ಟಿದ್ದು, ಅದರಲ್ಲಿಯೂ ಸಹ ನೋಟುಗಳು ಇದ್ದವು. ಸದರಿ ನೋಟುಗಳ ನಂಬರುಗಳು ಮತ್ತು ನಾವು ಕಛೇರಿಯಲ್ಲಿ ಬರೆದುಕೊಂಡಿದ್ದ ನೋಟುಗಳ ಸಂಖ್ಯೆಗಳು ಒಂದಕ್ಕೊಂದು ತಾಳೆಯಾಗಲಿಲ್ಲ, ನಂತರ ಆರೋಪಿ ಲೋಕಾಯುಕ್ತ ಪೋಲೀಸರಿಗೆ ಇನ್ನೊಂದು ಹಣ ಇದ್ದ ಕವರನ್ನು ಕೊಟ್ಟಿರುತ್ತಾರೆ. ಸದರಿ ಕವರಿನಲ್ಲಿದ್ದ ನೋಟುಗಳ ನಂಬರುಗಳು ಮತ್ತು ನಾವು ಹಾಳೆಯಲ್ಲಿ ಬರೆದುಕೊಂಡಿದ್ದ ನೋಟುಗಳ ನಂಬರುಗಳನ್ನು ನೋಡಿದಾಗ ಅವು ಒಂದಕ್ಕೊಂದು

ತಾಳೆಯಾದವು. ನಂತರ ಲೋಕಾಯುಕ್ತ ಪೋಲೀಸರು ಮೂರು ಬಟ್ಟಲುಗಳಲ್ಲಿ ದ್ರಾವಣ ತಯಾರಿಸಿದರು. ಮತ್ತು ಒಂದು ದ್ರಾವಣವನ್ನು ಸ್ಯಾಂಪಲ್ಲಿಗಾಗಿ ಬೇರೆ ಬಾಟಲಿಯಲ್ಲಿ ತೆಗೆದಿಟ್ಟು ಕೊಂಡರು. ಆರೋಪಿಯ ಎರಡೂ ಕೈಗಳನ್ನು ಒಂದೊಂದು ಬಟ್ಟಲಲ್ಲಿ ಅದ್ದಿಸಿದರು. ಆಗ ದ್ರಾವಣ ಗುಲಾಬಿ ಬಣ್ಣಕ್ಕೆ ತಿರುಗಿತು. ಸದರಿ ಗುಲಾಬಿ ದ್ರಾವಣವನ್ನು ಸಹ ಸ್ಯಾಂಪಲ್ಲಿಗಾಗಿ ಪ್ರತ್ಯೇಕ ಬಾಟಲಿಯಲ್ಲಿ ತೆಗೆದಿಡಲಾಯಿತು. ಮತ್ತು ಒಂದು ಹತ್ತಿಯಿಂದ ಹಣ ಇಟ್ಟ ಕವರಿಗೆ ಒರೆಸಿ ಅದನ್ನು ದ್ರಾವಣದಲ್ಲಿ ಅದ್ದಿದಾಗ ಅದು ಸಹ ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಅದನ್ನು ಸಹ ಪ್ರತ್ಯೇಕ ಸ್ಯಾಂಪಲ್ ಬಾಟಲಿಯಲ್ಲಿ ಇಟ್ಟಿರುತ್ತಾರೆ, ಮತ್ತು ಹತ್ತಿಯನ್ನು ಸಹ ಅಮಾನತ್ತು ಪಡಿಸಿದ್ದಾರೆ. ನಾನು, ಸಹ ಪಂಚ ಮತ್ತು ಪಿರ್ಯಾದಿದಾರ ಸ್ಯಾಂಪಲ್ ಬಾಟಲಿಗಳಿಗೆ ಹಚ್ಚಿದ ಪಂಚಚೀಟಿಗಳಿಗೆ ಸಹಿ ಮಾಡಿದ್ದೇವೆ. ಲೋಕಾಯುಕ್ತ ಪೋಲೀಸರು ಆರೋಪಿಗೆ ಲಂಚದ ಹಣದ ಬಗ್ಗೆ ವಿಚಾರಣೆ ಮಾಡಿದ್ದಾರೆ. ಅದಕ್ಕೆ ಆರೋಪಿಯು ಸಮಜಾಯಿಷಿ ಹೇಳಿಕೆ ಪತ್ರ ಬರೆದುಕೊಟ್ಟಿದ್ದಾರೆ. ಮತ್ತು ಪಿರ್ಯಾದಿದಾರರು ಆರೋಪಿಗೆ ಲಂಚದ ಹಣ ಕೊಟ್ಟಿದ್ದು ನಿಜ ಇರುತ್ತದೆ. ಮತ್ತು ಆರೋಪಿ ಬರೆದುಕೊಟ್ಟ ಸಮಜಾಯಿಷಿ ಪತ್ರ ಸುಳ್ಳಿನಿಂದ ಕೂಡಿರುತ್ತದೆ. ಮತ್ತು ಆರೋಪಿ ಬರೆದುಕೊಟ್ಟ ಸಮಜಾಯಿಷಿ ಪತ್ರಕ್ಕೆ ನಾನು ಸಹ ಸಹಿ ಮಾಡಿದ್ದೇನೆ ನಾನು ಈಗ ಆರೋಪಿ ಬರೆದುಕೊಟ್ಟ ಸಮಜಾಯಿಷಿ ಪತ್ರ ನೋಡುತ್ತಿದ್ದು ಅದರ ಮೇಲೆ ನನ್ನ ಸಹಿ ಇದ್ದು, ಸದರಿ ಸಮಜಾಯಿಷಿ ಪತ್ರವನ್ನು ನಿ.ಪಿ-6 ಅಂತ ಗುರುತಿಸಲಾಯಿತು. ನನ್ನ ಸಹಿ ನಿ.ಪಿ-6(ಎ) ಅಂತ ಗುರುತಿಸಲಾಯಿತು. ಸಾಕ್ಷಿ ಸ್ವಇಚ್ಛೆಯಿಂದ ಹೇಳುವುದೇನಂದರೆ ನಿ.ಪಿ-6ರ ಪ್ರತಿ ಪುಟಕ್ಕೂ ನಾನು ಸಹಿ ಮಾಡಿದ್ದೇನೆ. ವಿಚಾರಣೆಯ ಕಾಲಕ್ಕೆ ಆರೋಪಿ ಲೋಕಾಯಕ್ತ ಪೋಲೀಸರಿಗೆ ಪಿರ್ಯಾದಿದಾರರಿಗೆ ಸಂಬಂಧಿಸಿದ ಕಡತವನ್ನು ಕೊಟ್ಟಿರುತ್ತಾರೆ. ಮತ್ತು ಹಾಸ್ಟೆಲ್ಲಿನಲ್ಲಿ ಆರೋಪಿಯ ಮೇಲಾಧಿಕಾರಿಗಳು ಯಾರು ಇರಲಿಲ್ಲ. ಮತ್ತು ಕಡತದಲ್ಲಿರುವ ದಾಖಲೆಗಳನ್ನು ಆರೋಪಿಯೇ ಜೆರಾಕ್ಸ ಮಾಡಿಸಿ, ತಾನೇ ಟ್ರೂ ಕಾಪಿ ಅಂತ ಬರೆದು ಸಹಿ ಮಾಡಿದ್ದಾರೆ. ಮತ್ತು ಸದರಿ ದಾಖಲೆಗಳಿಗೆ ನಾನು ಮತ್ತು ಸಹ ಪಂಚ ಸಹಿ ಮಾಡಿದ್ದೇವೆ. ಪಿರ್ಯಾದಿದಾರರ ಕಡತದದಿಂದ ಪಡೆದ ಜೆರಾಕ್ಸ್ ಕಾಪಿಗಳನ್ನು ನಾನು ನೋಡುತ್ತಿದ್ದು, ಅವುಗಳು ಪುಟ 57 ರಿಂದ 75 ಪುಟಗಳಿದ್ದು, ಅವುಗಳನ್ನು ಒಟ್ಟಾರೆ ನಿ.ಪಿ-7 ಅಂತ ಗುರುತಿಸಲಾಯಿತು. ಸದರಿ ದಾಖಲೆಗಳ ಪ್ರತಿ ಪುಟಕ್ಕೂ ನಾನು ಸಹಿ ಮಾಡಿದ್ದೇನೆ. ನಾನು, ಸಹ ಪಂಚ ಮತ್ತು ಪಿರ್ಯಾದಿ ಪ್ರತಿ ಪುಟಕ್ಕೂ ಸಹಿ ಮಾಡಿದ್ದಾರೆ. ಮತ್ತು ಮೇಲೆ ಹೇಳಿದ

ಎಲ್ಲ ನಡವಳಿಕೆಗಳನ್ನು ಪೋಲೀಸರು ವೀಡಿಯೋ ಮಾಡಿಕೊಂಡಿದ್ದಾರೆ. ಈ ಬಗ್ಗೆ ಪೋಲೀಸರು ಒಂದು ಮಹಜು ಮಾಡಿದ್ದು , ಸದರಿ ಮಹಜನ್ನು ನಿ.ಪಿ-8 ಅಂತ ಗುರುತಿಸಿದ್ದು, ಅದರ ಮೇಲಿರುವ ನನ್ನ ಸಹಿ ನಿ.ಪಿ-8(ಎ) ಅಂತ ಗುರುತಿಸಲಾಯಿತು. ಸದರಿ ನಿ.ಪಿ-8 ಕ್ಕೆ ನಾನು, ಸಹ ಪಂಚ ಮತ್ತು ಪಿರ್ಯಾದಿದಾರ ಸಹಿ ಮಾಡಿದ್ದೇವೆ. ಮತ್ತು ಟ್ರ್ಯಾಪ್ ಪಂಚನಾಮೆಯ ಒಂದು ನಕಲನ್ನು ಆರೋಪಿಗೆ ಕೊಟ್ಟು ಆರೋಪಿಯ ಸಹಿಯನ್ನು ಟ್ರ್ಯಾಪ್ ಪಂಚನಾಮೆಯ ಮೇಲೆ ಪಡೆದಿದ್ದು ಇರುತ್ತದೆ. ಅದಾದನಂತರ ಟ್ರ್ಯಾಪ್ ಮಾಡಿದ ಲಂಚದ ಹಣದ ನೋಟುಗಳ ನಂಬರುಗಳನ್ನು ದಾಖಲೆ ನಂಬರು 10 ಮತ್ತು 11 ರಲ್ಲಿ ಬರೆದುಕೊಂಡಿದ್ದು, ಅವುಗಳಿಗೆ ನಾನು ಸಹಿ ಮಾಡಿದ್ದೇನೆ. ಸದರಿ ದಾಖಲೆಗಳನ್ನು ನಿ.ಪಿ-9 ಮತ್ತು 10 ಅಂತ ಗುರುತಿಸಲಾಯಿತು. ಅವುಗಳ ಮೇಲಿರುವ ನನ್ನ ಸಹಿಗಳು ನಿ.ಪಿ-9(ಎ) ಮತ್ತು ನಿ.ಪಿ-10(ಎ) ಅಂತ ಗುರುತಿಸಲಾಯಿತು. ಸದರಿ ಪಂಚನಾಮೆಗೆ ಸೀಲು ಹಾಕಿದ ಅಕ್ಷರಗಳು ಈಗ ನನಗೆ ನೆನಪಿಲ್ಲ. ಆದರೆ ಅಕ್ಷರಗಳಿಗೆ ನಾನು ಸಹಿ ಮಾಡಿದ್ದೇನೆ. ಸದರಿ ದಾಖಲೆ ದಾಖಲೆ ನಂಬರು 13 ಇದ್ದು, ಅದನ್ನು ನಿ.ಪಿ-11 ಅಂತ ಗುರುತಿಸಿದ್ದು, ಮತ್ತು ಅದರಲ್ಲಿರುವ ನನ್ನ ಸಹಿ ನಿ.ಪಿ-11(ಎ) ಇರುತ್ತದೆ. ಮತ್ತು ಘಟನೆಯ ಬಗ್ಗೆ ಪೋಲೀಸರು ನನಗೆ ವಿಚಾರಣೆ ಮಾಡಿರುತ್ತಾರೆ. ಮತ್ತು ಪೋಲೀಸರು ಟ್ರ್ಯಾಪ್ ಮಾಡಿದ ಜಾಗೆಯ ನಕಾಶೆ ಮಾಡಿರುತ್ತಾರೆ. ಸದರಿ ನಕಾಶೆ ದಾಖಲೆ ನಂಬರು 14 ಇದ್ದು, ಪುಟ ನಂಬರು 52 ಇದ್ದು, ಸದರಿ ನಕಾಶೆಗೆ ನಾನು ಸಹಿ ಮಾಡಿದ್ದೇನೆ. ನಕಾಶೆಯನ್ನು ನಿ.ಪಿ-12 ಅಂತ ಮತ್ತು ನನ್ನ ಸಹಿಯನ್ನು ನಿ.ಪಿ-12(ಎ) ಅಂತ ಗುರುತಿಸಲಾಯಿತು. ನಾವು ಮತ್ತು ಪೋಲೀಸರು ಇಂಜಿನಿಯರ್ ಅವರಿಗೆ ನಕಾಶೆ ತಯಾರಿಸಲು ಘಟನೆ ನಡೆದ ಸ್ಥಳ ತೋರಿಸಿದ್ದೇವೆ. ನಂತರ ಇಂಜಿನಿಯರ್ ನಕಾಶೆ ತಯಾರಿಸಿದ್ದಾರೆ. ಮೇಲೆ ಹೇಳಿದ ನಡವಳಿಕೆಗಳ ಬಗ್ಗೆ ಪೋಲೀಸರು ಪೋಟೋ ತೆಗೆದಿದ್ದು, ಸದರಿ ಪೋಟೋಗಳನ್ನು ನೋಡುತ್ತಿದ್ದು, ದಾಖಲೆ 17 ರಲ್ಲಿ ಪುಟ ಸಂಖ್ಯೆ 76 ರಿಂದ 136 ರವರೆಗೆ ಒಟ್ಟಾರೆ 62 ಪೋಟೋಗಳು ಇದ್ದು, ಅವುಗಳನ್ನು ನಿ.ಪಿ-13 ರಿಂದ ನಿ.ಪಿ-74 ಅಂತ ಗುರುತಿಸಲಾಯಿತು. ನನಗೆ ಈಗ ಸ್ಯಾಂಪಲ್ ಬಾಟಲ್ ಗಳನ್ನು ತೋರಿಸಿದ್ದು, ಸದರಿ ಸ್ಯಾಂಪಲ್ ಬಾಟಲುಗಳು 6 ಇದ್ದು, ಅವುಗಳನ್ನು ಮು.ಮಾ.1 ರಿಂದ ಮು.ಮಾ.6 ಅಂತ ಗುರುತಿಸಲಾಯಿತು. ನಡವಳಿಕೆಯ ಕಾಲಕ್ಕೆ ಪೋಲೀಸರು ಸಿ.ಡಿ. ಮಾಡಿದ್ದು, ಈಗ ನಾಲ್ಕು ಸಿ.ಡಿ.ಗಳನ್ನು ನೋಡುತ್ತಿದ್ದು , ಅವುಗಳನ್ನು ಮು.ಮಾ.7 ರಿಂದ ಮು.ಮಾ.10 ಅಂತ ಗುರುತಿಸಲಾಯಿತು. ನಾನು ಈಗ ಹತ್ತಿಯ

ತುಣಕನ್ನು ನೋಡುತ್ತಿದ್ದು, ಅದನ್ನು ಒಂದು ಪ್ಲಾಸ್ಟಿಕ್ ಕವರಿನಲ್ಲಿ ಹಾಕಿದ್ದು, ಅದನ್ನು ಮು.ಮಾ.11 ಅಂತ ಗುರುತಿಸಲಾಯಿತು. ಮತ್ತು ಆರೋಪಿ ಕೊಟ್ಟ ಕವರನ್ನು ಹತ್ತಿ ತುಣುಕಿನಿಂದ ಒರೆಸಿ ಹತ್ತಿ ಹಾಕಿದ್ದ ಕವರನ್ನು ಮು.ಮಾ.12 ಅಂತ ಗುರುತಿಸಲಾಯಿತು. ಆರೋಪಿ ಮೊದಲು ಪೋಲೀಸರಿಗೆ ಕೊಟ್ಟ ಕವರಿನಲ್ಲಿದ್ದ ಹಣ ಮತ್ತು ಎರಡನೇ ಕವರಿನಲ್ಲಿರುವ ಲಂಚದ ಹಣವನ್ನು ಪೋಲೀಸರು ಜಪ್ತಿ ಮಾಡಿದ್ದಾರೆ. ಸದರಿ ಕವರಿಗಳಿಗೆ ನಾನು, ಸಹ ಪಂಚ ಮತ್ತು ಪಿರ್ಯಾದಿದಾರ ಸಹಿ ಮಾಡಿದ್ದೇವೆ. ಮೇಲೆ ಹೇಳಿದ ವಿಷಯಗಳ ಬಗ್ಗೆ ಪೋಲೀಸರು ನನ್ನನ್ನು ವಿಚಾರಣೆ ಮಾಡಿದ್ದಾರೆ.

ಪಾಟೀ ಸವಾಲು ಃ ಆರೋಪಿ ಪರ ವಕೀಲರಿಂದಃ

ಪಾಟೀ ಸವಾಲನ್ನು ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

ನ್ಯಾಯಾಧೀಶರು, ವಿಶೇಷ ನ್ಯಾಯಾಲಯ,
ದಾವಣಗೆರೆ.